47

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 14 ಎಲ್‌ಜಿಡಿ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22-11-2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬೆಂಗಳೂರು.

ಇವರಿಗೆ:
ಜಿಲ್ಲಾಧಿಕಾರಿಗಳು,
ಗದಗ ಜಿಲ್ಲೆ,
ಗದಗ.

ಮಾನ್ಯರೆ,

ವಿಷಯ:-ಕೆಶಿಫ್-3ರ ಯೋಜನೆಯಡಿಯಲ್ಲಿ ಗದಗದಿಂದ ಹೊನ್ನಾಳಿ ರಸ್ತೆ ಅಭಿವೃದ್ಧಿಗಾಗಿ ಗುರುತಿಸಿದ ಅರಣ್ಯ ಜಮೀನುಗಳ ಪರಿಹಾರರ್ಥವಾಗಿ ಗದಗ ಜಿಲ್ಲೆ, ರೋಣ ತಾಲ್ಲೂಕು ಶಾಂತಗಿರಿ ಗ್ರಾಮದ ಗಾಯರಾಣ ಜಮೀನು ರಿ.ಸ.ನಂ.125/3ಕ್ಷೇತ್ರ 79ಎ -39 ಗುಂಟೆ ಪೈಕಿ 9-30 ಗುಂ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಉಲ್ಲೇಖ: 1) ಇದೇ ಸಮ ಸಂಖ್ಯೆಯ ದಿನಾಂಕ: 20-09-2019.
2) ತಮ್ಮ ಸಂಖ್ಯೆ: ಎಲ್.ಎನ್.ಡಿ/ಸಿಆರ್/311/2018-19.ದಿ:04-02-2019.

= = =

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ ಕೆಶಿಫ್-3ರ ಯೋಜನೆಯಡಿಯಲ್ಲಿ ಗದಗದಿಂದ ಹೊನ್ನಾಳಿ ರಸ್ತೆ ಅಭಿವೃದ್ಧಿಗಾಗಿ ಗುರುತಿಸಿದ ಅರಣ್ಯ ಜಮೀನುಗಳ ಪರಿಹಾರರ್ಥವಾಗಿ ಗದಗ ಜಿಲ್ಲೆ, ರೋಣ ತಾಲ್ಲೂಕು ಶಾಂತಗಿರಿ ಗ್ರಾಮದ ಗಾಯರಾಣ ಜಮೀನು ರಿ.ಸ.ನಂ.125/3ಕ್ಷೇತ್ರ 79ಎ -39 ಗುಂಟೆ ಪೈಕಿ 9-30 ಗುಂ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ದಿನಾಂಕ: 20-09-2019 ರಂದು ಸರ್ಕಾರದ ಪೂರ್ವಾನುಮೋದನೆ ನೀಡಲಾಗಿರುತ್ತದೆ.

ಮುಖ್ಯ ಯೋಜನಾಧಿಕಾರಿ, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ ಉಲ್ಲೇಖಿತ(2)ರ ಪತ್ರದಲ್ಲಿ ಜಿಲ್ಲಾಧಿಕಾರಿಯವರು ಕಳುಹಿಸಿರುವ ಪ್ರಸ್ತಾವನೆಯಲ್ಲಿ 9.36 ಎಕರೆ ಜಮೀನಿನ ಬದಲಾಗಿ 9.30 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಕೋರಿದ್ದು, ಅದರಂತೆ ಉಲ್ಲೇಖ(1)ರ ಪತ್ರದಲ್ಲಿ 9.30 ಎಕರೆ ವರ್ಗಾಯಿಸಲು ಅನುಮೋದನೆ ನೀಡಲಾಗಿರುತ್ತದೆ. ಆದ್ದರಿಂದ ಅನುಮೋದನೆ ನೀಡಿರುವ 9-30ಎ/ಗುಂ ಬದಲಾಗಿ 9-36 ಎ/ಗುಂ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಕೆಶಿಫ್-3ರ ಯೋಜನೆಯಡಿಯಲ್ಲಿ ಗದಗದಿಂದ ಹೊನ್ನಾಳಿ ರಸ್ತೆ ಅಭಿವೃದ್ಧಿಗಾಗಿ ಗುರುತಿಸಿದ ಅರಣ್ಯ ಜಮೀನುಗಳ ಪರಿಹಾರರ್ಥವಾಗಿ ಗದಗ ಜಿಲ್ಲೆ, ರೋಣ ತಾಲ್ಲೂಕು, ಶಾಂತಗಿರಿ ಗ್ರಾಮದ ಗಾಯರಾಣ ಜಮೀನು ರಿ.ಸ.ನಂ.125/3ಕ್ಷೇತ್ರ 79-39 ಎ/ಗುಂಟೆ ಪೈಕಿ 9-30 ರ ಬದಲಾಗಿ 9-36 ಎಕರೆ ಗಾಯರಾಣ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರದ ಪೂರ್ವಾನುಮೋದನೆ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

22/11/19

(ಎಂ.ಇ. ಚನ್ನಬಸವರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಂಜೂರಾತಿ-3)

B